ಕ್ಷಣ ಕ್ಷಣದ ಸುದ್ದಿಗಾಗಿ ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ಸಂಪಾದಕೀಯ

ಹೊರೆ ಕಡಿಮೆ ಮಾಡಿ

ಪೆಟ್ರೋಲ್, ಡೀಸೆಲ್ ಮೇಲೆ ವಿಧಿಸಿರುವ ಸೆಸ್ ರದ್ದು, ಅನ್ನಭಾಗ್ಯ ಯೋಜನೆಯಡಿ ವಿತರಿಸುತ್ತಿರುವ ಅಕ್ಕಿ ಪ್ರಮಾಣವನ್ನು ಮತ್ತೆ 5 ರಿಂದ 7ಕ್ಕೆ ಹೆಚ್ಚಿಸಬೇಕು ಎಂದು ಮೈತ್ರಿ ಸರಕಾರದ ಎರಡೂ ಪಕ್ಷಗಳಲ್ಲಿ ದಿನೇ ದಿನೆ ಹೆಚ್ಚುತ್ತಿರುವ ಬೇಡಿಕೆಗೆ ಮಣಿಯಬೇಕಾದ ಒತ್ತಡಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿ ಸಿಲುಕಿದ್ದಾರೆ. ಬಜೆಟ್ ಮೇಲಿನ ಚರ್ಚೆ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರೇ ಈ ಬಗ್ಗೆ ಅಪಸ್ವರ ಎತ್ತಿದ್ದಾರೆ. ಜತೆಗೆ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲೂ ಬಹುತೇಕ ಶಾಸಕರದು ಇದೇ ಅಭಿಪ್ರಾಯವಾಗಿದೆ. ಕುಮಾರಸ್ವಾಮಿ ಅವರು ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸದೆ ಈ ಬಗ್ಗೆ ಏಕಮುಖ ನಿರ್ಣಯ ಕೈಗೊಂಡ ಬಗ್ಗೆ ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಸಮನ್ವಯ ಸಮಿತಿ ಅಧ್ಯಕ್ಷರೂ ಆಗಿರುವ ಮಾಜಿ ಸಿಎಂ ಸಿದ್ದರಾಮಯ್ಯನವರು ಈ ಬಗ್ಗೆ ಕುಮಾರಸ್ವಾಮಿ ಅವರಿಗೆ ಪತ್ರವನ್ನೂ ಬರೆದಿದ್ದಾರೆ. ಈ ಎಲ್ಲ ಒತ್ತಡಗಳನ್ನು ಒತ್ತಟ್ಟಿಗೆ ಇಟ್ಟು ನೋಡುವುದಾದರೂ ಇಂಧನ ಮೇಲಿನ ಸೆಸ್ ಜನಸಾಮಾನ್ಯರ ಮೇಲೆ ಹೆಚ್ಚುವರಿ ಹೊರೆ ತಂದಿರುವುದು ಸುಳ್ಳಲ್ಲ. ಸರಕಾರ ಸಂಪನ್ಮೂಲ ಕ್ರೋಡೀಕರಣಕ್ಕೆ ತೆರಿಗೆ ಮೊರೆ ಹೋಗುವುದು ಅನಿವಾರ್ಯವಾದರೂ ಈಗಾಗಲೇ ನಿತ್ಯ ಏರಿಕೆ ಕಾಣುತ್ತಿರುವ ಇಂಧನ ಬೆಲೆ ಜತೆಗೆ ರಾಜ್ಯ ಸರಕಾರದ ಬರೆಯೂ ಸೇರಿಕೊಂಡರೆ ಜನ ಸಹಿಸಿಕೊಳ್ಳುವುದಾದರೂ ಹೇಗೆ? ರೈತರ ಸಾಲಮನ್ನಾಕ್ಕಾಗಿ ಅನ್ಯರ ಮೇಲೆ ಅನಗತ್ಯ ತೆರಿಗೆ ವಿಧಿಸಲಾಗಿದೆ ಎಂಬ ಪ್ರಚಾರವೂ ನಡೆದಿದ್ದು, ಕೃಷಿಯೇತರರು ರೈತರನ್ನು ವಾರೆಗಣ್ಣಿನಿಂದ ನೋಡುವಂತಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಜನರ ಹಿತದೃಷ್ಟಿಯಿಂದ ಈ ಹೊರೆ ಕಡಿಮೆ ಮಾಡುವುದು ಸಿಎಂ ಹೊಣೆ. ಅದೇ ಅನ್ನಭಾಗ್ಯ ಅಕ್ಕಿ ಪ್ರಮಾಣಕ್ಕೂ ಹಾಕಿರುವ ಕತ್ತರಿಯನ್ನು ಹಿಂತೆಗೆದುಕೊಂಡರೆ ಬಡವರು ನಿರಾಳರಾಗುತ್ತಾರೆ. ಯೋಜನೆಗಳು ಮತ್ತಷ್ಟು ಹಿಗ್ಗಬೇಕೆ ಹೊರತು ಕುಗ್ಗಬಾರದು. ಜನ ಹೋಲಿಕೆ ಮಾಡಿ ಷರಾ ಬರೆಯಲು ಆಸ್ಪದ ಕೊಡಬಾರದು.

ಪಾಕ್ ಹಿಂದೂಗಳು ಅನಾಥ

1947ರಲ್ಲಿ ಭಾರತದ ವಿಭಜನೆ ನಂತರ ಪಾಕಿಸ್ತಾನದಲ್ಲಿಯೇ ಉಳಿದ ಹಿಂದೂಗಳು ಇಂದು ಯಾರಿಗೂ ಬೇಡದವರಾಗಿ ಒಂದು ರೀತಿ ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದಾರೆ. ಪಾಕಿಸ್ತಾನದಲ್ಲಿ ಗೌರವಯುತವಾಗಿ ಬಾಳಲಾಗದೆ ಇತ್ತ ಭಾರತದಿಂದಲೂ ಸೂಕ್ತ ಸ್ಪಂದನೆ ಇಲ್ಲದೆ ಇವರ ಪಾಡು ಹೇಳತೀರದಾಗಿದೆ. ಮತಾಂಧತೆಯ ಉತ್ತುಂಗದಲ್ಲಿರುವ ಪಾಕಿಸ್ತಾನದಲ್ಲಿ ಇಂದಿಗೂ ಹಿಂದೂಗಳು ಸ್ವತಂತ್ರವಾಗಿ ಬದುಕು ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದಾರೆ. ಪಾಕಿಸ್ತಾನದ ಸಂಸ್ಥಾಪಕ ಮೊಹಮದ್ ಅಲಿ ಜಿನ್ನಾ ಆಶಯಗಳನ್ನು ಗಾಳಿಗೆ ತೂರಿರುವ ಅಲ್ಲಿನ ಸಮಾಜವೇ ಅಲ್ಪಸಂಖ್ಯಾತ ಹಿಂದೂಗಳನ್ನು ತೀರಾ ನಿಕೃಷ್ಟವಾಗಿ ನೋಡುತ್ತಿದೆ. ಪಾಕಿಸ್ತಾನವು ಉಗ್ರವಾದದ ಕಾರ್ಖಾನೆಯಾಗಿ ಮಾರ್ಪಟ್ಟ ನಂತರವಂತೂ ಹಿಂದೂಗಳ ಸ್ಥಿತಿ ಇನ್ನೂ ದುರ್ಭರವಾಗಿದೆ. ಬಲವಂತ ಮತಾಂತರದ ಪಿಡುಗು ಅಲ್ಲಿನ ಹಿಂದೂಗಳನ್ನು ಹೈರಾಣಾಗಿಸಿದೆ. ಇದೆಲ್ಲದರಿಂದ ವಿಭಜನೆಯ ಸಂದರ್ಭದಲ್ಲಿ ಭಾರತಕ್ಕೆ ಬರಬಹುದಾಗಿದ್ದರೂ ಅಲ್ಲಿನ ನೆಲದಲ್ಲಿಯೇ ಉಳಿದ ಹಿಂದೂ ಕುಟುಂಬಗಳು ಇಂದು ಪರಿತಪಿಸುವಂತಾಗಿದೆ. ಪಾಕಿಸ್ತಾನದಲ್ಲಂತೂ ತಮಗೆ ನೆಮ್ಮದಿಯ ಬದುಕು ಅಸಾಧ್ಯ ಎಂದು ತಿಳಿದು ಭಾರತಕ್ಕೆ ವಲಸೆ ಬಂದ ಅನೇಕ ಹಿಂದೂ ಕುಟುಂಬಗಳನ್ನು ಇಲ್ಲಿನ ಸರಕಾರಗಳೂ ನಡು ನೀರಿನಲ್ಲಿ ಕೈಬಿಟ್ಟಿವೆ ಎಂದರೆ ತಪ್ಪಲ್ಲ. ಭಾರತಕ್ಕೆ ವಲಸೆ ಬಂದು ದಶಕಗಳೇ ಕಳೆದರೂ ಕನಿಷ್ಟ ಇಲ್ಲಿನ ಪೌರತ್ವ, ನಾಗರಿಕ ಹಕ್ಕುಗಳನ್ನು ಪಡೆಯಲಾಗದೆ ಎರಡನೇ ದರ್ಜೆ ಪ್ರಜೆಗಳಂತೆ ಬದುಕು ದೂಡುತ್ತಿದ್ದಾರೆ. ಭಾರತದ ಈ ಧೋರಣೆಯಿಂದ ತೀವ್ರ ಭ್ರಮನಿರಸನಗೊಂಡ ಅನೇಕ ಹಿಂದೂ ಕುಟುಂಬಗಳು ಮತ್ತೆ ಪಾಕಿಸ್ತಾನಕ್ಕೆ ಮರಳಿ ಇಸ್ಲಾಂಗೆ ಮತಾಂತರಗೊಂಡು ನೆಮ್ಮದಿಯ ಬದುಕು ಸಾಗಿಸಲು ಮುಂದಾಗಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು 2000 ವಲಸಿಗ ಹಿಂದೂಗಳು ಪಾಕಿಸ್ತಾನಕ್ಕೆ ಮರಳಿದ್ದಾರೆ. ಇದು ಭಾರತ ನಿಜಕ್ಕೂ ತಲೆತಗ್ಗಿಸುವಂತಹ ವಿಷಯವೇ ಸರಿ.

ಚಿತ್ರಸ್ಫೂರ್ತಿ



ನೀವು ಇಂದು ಮಾಡುತ್ತಿರುವುದು, ನಾಳೆ ನೀವು ಹೋಗಿ ತಲುಪಬೇಕು ಎಂಬುದಕ್ಕೆ ಪೂರಕವಾಗಿದೆಯೆ? ಕೇಳಿಕೊಳ್ಳಿ.

ತಿಳಿಸಾರ

ಟ್ವೀಟಿಗರಿಗೆ ಟ್ರಂಪ್ ಫೇವರಿಟ್!

280 ಅಕ್ಷರಗಳಲ್ಲೇ ಜಗತ್ತನ್ನು ಕೂಡಿಟ್ಟ ಶ್ರೇಯ ಟ್ವೀಟರ್‌ಗೆ ಸಲ್ಲಬೇಕು. ಜಗತ್ತನ್ನಾಳುವ ಪ್ರಮುಖರಿಂದ ಹಿಡಿದು ಸಾಮಾನ್ಯರೂ ಕೂಡ ಟ್ವಿಟರ್ ಖಾತೆ ಹೊಂದಿದ್ದಾರೆ. ಯಾರು ಯಾರೊಂದಿಗಾದರೂ ನೇರವಾಗಿ ಸಂಹವನ ನಡೆಸುವ ಅವಕಾಶ ಟ್ವಿಟರ್‌ನಲ್ಲಿದೆ. ಜಗತ್ತಿನ ದೊಡ್ಡಣ್ಣ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸದ್ಯ ಹೆಚ್ಚು ಫಾಲೋವರ್ಸ್ ಹೊಂದಿದ್ದು, ಅದು ಅವರಿಗೊಂದು ಹಿರಿಮೆಯೇ. ಹಾಗಿದ್ದರೆ ಯಾವ ನಾಯಕರಿಗೆ ಎಷ್ಟು ಫಾಲೋವರ್ಸ್‌ಗಳಿದ್ದಾರೆ ಒಮ್ಮೆ ನೋಡಿ!

ಯಾರಿಗೆ ಎಷ್ಟು ಫಾಲೋವರ್ಸ್‌ಗಳು?

ಡೊನಾಲ್ಡ್ ಟ್ರಂಪ್	53.3 ಮಿಲಿಯನ್
ಪೋಪ್ ಆಫ್ ಕಾಥೋಲಿಕ್	47.5 ಮಿಲಿಯನ್
ನರೇಂದ್ರ ಮೋದಿ	43.3 ಮಿಲಿಯನ್
ಬ್ರಿಟನ್ ಪ್ರಧಾನಿ ಥೆರೆಸಾ ಮೇ	5.7 ಮಿಲಿಯನ್
ಯುಎಇ ಪ್ರಧಾನಿ ಮೊಹಮ್ಮದ್ ಬಿನ್ ರಷೀದ್	9.3 ಮಿಲಿಯನ್

ಅಮೆರಿಕ ಅಧ್ಯಕ್ಷರಾದ ನಂತರ ಡೋನಾಲ್ಡ್ ಟ್ರಂಪ್ ಫಾಲೋವರ್ಸ್‌ಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ.

ನಕಲಿ ಬಳಕೆದಾರರನ್ನು ಟ್ವಿಟರ್‌ನಿಂದ ಹೊರಹಾಕಿದ ನಂತರ ಹಲವರ ಫಾಲೋವರ್ಸ್‌ಗಳ ಪಟ್ಟಿಯಲ್ಲಿ ಗಣನೀಯ ಇಳಿಕೆ.

ಕಾಕಾ ಹೋಟ್ಲು

ವಿಧಾನಸೌಧ, ವಿಕಾಸಸೌಧ 'ದಲ್ಲಾಳಿ'ಗಳ ಕೇಂದ್ರಗಳಾಗಿವೆ ಎಂದು ಮಾಜಿ ಸಚಿವ ಎಚ್. ವಿಶ್ವನಾಥ್ ಹೇಳವ್ರಂತೇ?

'ಸರಕಾರಿ ಕೆಲಸ ದೇವರ ಕೆಲಸ' ಅಂದ್ಮೆಲೆ ಅದನ್ನು ಮಾಡಿಕೊಡೋಕೆ ಪೂಜಾರಿಗಳು ಬೇಕಲ್ವೇ?!

ಇದು ಪತ್ರಕರ್ತರು ಮೈಕೊಡವಿ ನಿಲ್ಲುವ ಕಾಲ!



ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಮೊನ್ನೆ ನಾಲ್ಕು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವಿತ್ತು. ಆತ್ಮೀಯ ಮಿತ್ರ ನವೀನ್ ಸಾಗರ ತಮ್ಮದೇ ಡೆಡ್‌ಲೈನ್ ಕ್ರಿಯೇಶನ್ಸ್‌ನಿಂದ ಹೊರತಂದ ಆ ಪುಸ್ತಕಗಳ ಬಿಡುಗಡೆಗೆ ನನ್ನನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದರು. ಹೋಗಿದ್ದೆ. ಅದೊಂದು ವಿಶಿಷ್ಟ ಕಾರ್ಯಕ್ರಮ. ಕಾರಣ ಅಲ್ಲಿಗೆ ಬಂದ ಬಹುತೇಕ ಸಭಿಕರು ಫೇಸ್‌ಬುಕ್ ಆಮಂತ್ರಣ ನೋಡಿ ಬಂದವರೇ ಆಗಿದ್ದರು. ನವೀನ್ ಸಾಗರ ಫೇಸ್‌ಬುಕ್‌ನಲ್ಲಿ ಕ್ರಿಯಾಶೀಲ, ಅವರಿಗೆ ಅವರದ್ದೇ ಆದ ಫ್ಯಾನ್ ಫಾಲೋವಿಂಗ್ ಇದೆ. ಅವರೆಲ್ಲರಿಗೂ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿದ್ದರಿಂದ, ಭಾನುವಾರ ಸಾಯಂಕಾಲವಾದರೂ ಹೆಚ್ಚಿನ ಸಂಖ್ಯೆಯಲ್ಲಿ ಸಭಿಕರು ಆಗಮಿಸಿದ್ದರು. ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಅಷ್ಟೊಂದು ಹೆಚ್ಚಿನ ಸಂಖ್ಯೆಯಲ್ಲಿ ಜನ ಆಗಮಿಸಿದ್ದು ಅಪರೂಪವಾಗಿತ್ತು.

ಫೇಸ್‌ಬುಕ್ ಎಂಬ ಅನೂಹ್ಯ ವೇದಿಕೆ ಅವರೆಲ್ಲರನ್ನೂ ಅಲ್ಲಿಗೆ ಕರೆತಂದಿತ್ತು. ಗಡಿ, ಚೌಕಟ್ಟು, ಬೇಲಿಯೇ ಇಲ್ಲದ ಫೇಸ್‌ಬುಕ್ ಎಂಬ ಹರವು ಅವರೆಲ್ಲರನ್ನೂ ಅಲ್ಲಿ ಕೂಡಿಹಾಕಿತ್ತು. ಫೇಸ್‌ಬುಕ್ ಹೊರತಾಗಿ ನವೀನ್ ಬೇರೆ ಮಾಧ್ಯಮ ಅಥವಾ ಮಾರ್ಗಗಳ ಮೂಲಕ ಆಮಂತ್ರಣ ನೀಡಿರಲಿಲ್ಲ. ಅದೊಂದು ರೀತಿಯಲ್ಲಿ ಗೆಳೆತನ ಹಾಗೂ ಫೇಸ್‌ಬುಕ್‌ಗೆ ಮದುವೆ ಮಾಡಿಸಿದ ಮಂಟಪದಂತಿತ್ತು. ನಿಸ್ಸಂದೇಹವಾಗಿ, ಇದು ಫೇಸ್‌ಬುಕ್‌ನ ಗೆಲುವು ಹಾಗೂ ತಾಕತ್ತು. ಫೇಸ್‌ಬುಕ್ ಎಂಬುದು ಇಂದು ಕೇವಲ ಸಾಮಾಜಿಕ ಜಾಲತಾಣವಾಗಿ ಉಳಿದಿಲ್ಲ, ಅದು ಜಗತ್ತಿನ ಅತ್ಯಂತ ಬೃಹದ್ಭವ್ಯ ವೇದಿಕೆ. ಇಲ್ಲಿ ಯಾರು, ಯಾರನ್ನಾದರೂ ತಲುಪಬಹುದು, ಪರಿಚಿತರಾಗಬಹುದು, ಗೆಳೆತನ ಮಾಡಬಹುದು, ವಾದಕ್ಕಿಳಿದು ಬಡಿದಾಡಿಕೊಳ್ಳಬಹುದು. ಸಾಧ್ಯತೆಗಳು ಅಗಣಿತ.

ಹತ್ತೋ, ಹದಿನೈದೋ ವರ್ಷಗಳ ಹಿಂದೆ, ಇಂಥ ಕಾರ್ಯಕ್ರಮ ಮಾಡಬೇಕೆಂದಿದ್ದರೆ, ಪತ್ರಿಕೆ ಸಂಪಾದಕರನ್ನೋ, ಮುಖ್ಯವರದಿಗಾರನನ್ನೋ ಭೇಟಿಯಾಗಿ ದುಂಬಾಲು ಬೀಳಬೇಕಿತ್ತು. ಈ ಕಾರ್ಯಕ್ರಮದ ಸುದ್ದಿ ಪ್ರಕಟಿಸುವಂತೆ ಅವರ ಮರ್ಜಿ ಕಾಯಬೇಕಿತ್ತು. ಅದರಲ್ಲೂ ನೀವು ಆ ಪತ್ರಕರ್ತರಿಗೆ ಆಪ್ತರಾದರೆ, ವರದಿ ಗಮನಸೆಳೆಯುವಂತೆ ಪ್ರಕಟವಾಗುತ್ತಿತ್ತು. ಇಲ್ಲದಿದ್ದರೆ ಕಾಟಾಚಾರದ ಸಿಂಗಲ್ ಕಾಲಮ್ಮು ಸುದ್ದಿ. ಕಾರ್ಯಕ್ರಮದ ನಂತರ, ಆ ಸುದ್ದಿ ಹೇಗೆ ಪ್ರಕಟವಾಗಬೇಕೆಂಬುದನ್ನು ನಿರ್ಧರಿಸುತ್ತಿದ್ದುದ್ದೂ ಪತ್ರಕರ್ತರ ಮರ್ಜಿಯೇ. ಅಂದರೆ ಮುಖ್ಯ ವರದಿಗಾರರು ಅಥವಾ ಸಂಪಾದಕರು ಸುದ್ದಿಯ ಗೇಟ್ ಕೀಪರ್‌ನಂತೆ ವರ್ತಿಸುತ್ತಿದ್ದರು. ಇವರಿಗೆ ಸುದ್ದಿ ಯಾವುದೆಂದರೆ, ಅವರಿಬ್ಬರು ತಮಗೆ ಯಾವುದು ಆಪ್ತ, ಸಮರ್ಪಕ, 'ಲಾಭದಾಯಕ', ಹಿತಕರ ಎಂದು ಬಯಸುತ್ತಾರೋ, ಅವು ಮಾತ್ರ. ಹೀಗಾಗಿ ಕೆಲವು ಸುದ್ದಿ, ಪತ್ರಿಕೆಗಳಲ್ಲಿ ಪ್ರಧಾನವಾಗಿ ಪ್ರಕಟವಾದರೆ, ಇನ್ನುಳಿದ ಪತ್ರಿಕೆಗಳಲ್ಲಿ ಸುದ್ದಿ ಪ್ರಧಾನವಾಗಿದ್ದರೂ, ಎಲ್ಲೋ ಮೂಲೆಯಲ್ಲಿ ಚಿಕ್ಕದಾಗಿ ಪ್ರಕಟವಾಗುತ್ತಿತ್ತು.

ಈ ಫೇಸ್‌ಬುಕ್ ಬಂದ ನಂತರ, ಯಾರೂ ಪ್ರಚಾರಕ್ಕಾಗಿ ಪತ್ರಿಕೆಯ ಮೇಲೊಂದೇ ಅವಲಂಬಿತರಾಗಿಲ್ಲ. ಆ ಸುದ್ದಿ ಪತ್ರಿಕೆಯಲ್ಲಿ ಬಂದರೆ ಸರಿ, ಬರದಿದ್ದರೆ ಬೇಸರವಿಲ್ಲ. ಕಾರಣ ತಮ್ಮ ಸುದ್ದಿ ಯಾರಿಗೆ ತಲುಪಬೇಕೋ, ಅವರಿಗೆ ತಲುಪಿಸಲು ಫೇಸ್‌ಬುಕ್ ಇದೆ. ಪತ್ರಿಕೆಯ 'ಕಾರ್ಯಕ್ರಮ ಪಟ್ಟಿ'ಯಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಪ್ರಕಟವಾದ ಮಾತ್ರಕ್ಕೆ ಎಲ್ಲರೂ ಬರುವುದಿಲ್ಲ. ಅಂದರೆ ಪ್ರಕಟವಾದ ಸುದ್ದಿಯೆಲ್ಲ ಡೈರೆಕ್ಟ್ ಆಡಿಯನ್ಸ್(ನೇರ ಗ್ರಾಹಕ)ಗೆ ತಲುಪುವುದು ಸಂದೇಹ. ಯಾರ್‍ಯಾರಿಗೊ ತಲುಪುವ ಸಾಧ್ಯತೆ ಹೆಚ್ಚು. ಆದರೆ ಫೇಸ್‌ಬುಕ್ ಹಾಗಲ್ಲ, ನಮಗೆ ಬೇಕಾದವರಿಗೆ ಮಾತ್ರ ಸಂದೇಹ ತಲುಪಿಸುವ ಏಕಮುಖಿ ಹಾಗೂ ಬಹುಮುಖಿ ಆಯಾಮ ಹೊಂದಿದೆ. ರಾಜ್ಯದ ಯಾವುದೇ ಮೂಲೆಯಲ್ಲಿ ಕಾರ್ಯಕ್ರಮ ನಡೆದರೆ, ಅದು ಆ ಊರಿನ ವ್ಯಾಪ್ತಿಯ ಆವೃತ್ತಿಯಲ್ಲಿ ಮಾತ್ರ ಪ್ರಕಟವಾಗುತ್ತಿತ್ತು. ಅದು ರಾಜ್ಯವ್ಯಾಪಿ ಓದುಗರ ಗಮನಕ್ಕೆ ಬರುತ್ತಿರಲಿಲ್ಲ. ಆದರೆ ಫೇಸ್‌ಬುಕ್ ಈ 'ಆವೃತ್ತಿ ಪತ್ರಿಕೋದ್ಯಮ'ವನ್ನೇ ಅಪ್ರಸ್ತುತಗೊಳಿಸಿಬಿಟ್ಟಿತು. ಹೀಗಾಗಿ ಒಂದು ಕುಗ್ರಾಮದಲ್ಲಿ ನಡೆದ ಸಾಮಾನ್ಯ ಕಾರ್ಯಕ್ರಮ ಸಹ ಇಡೀ ದೇಶಕ್ಕೇ, ಜಗತ್ತಿಗೇ ಗೊತ್ತಾಗಬಹುದು. ಇತ್ತೀಚೆಗೆ ರಾಜಸ್ಥಾನದಲ್ಲಿ ಅಂಧ ಬಾಲಕನೊಬ್ಬ ಬರೆದ ಕಾದಂಬರಿ ಫೇಸ್‌ಬುಕ್ ಮೂಲಕ ಇಡೀ ವಿಶ್ವಕ್ಕೇ ಗೊತ್ತಾಗುವಂತಾಯಿತು.

ಇವೆಲ್ಲವುಗಳ ಫಲವಾಗಿ ಫೇಸ್‌ಬುಕ್ ಎಲ್ಲರ ಪಾಲಿಗೆ ವೇದಿಕೆಯಾಯಿತು, ಪತ್ರಿಕೆಯಾಯಿತು, ಅಭಿಪ್ರಾಯ ಅಖಾಡವಾಯಿತು. ಯಾರಿಗೆ ಹೇಳಿಕೊಳ್ಳಲು ಅನಿಸಿಕೆ, ಅಭಿಪ್ರಾಯಗಳಿವೆಯೋ ಅವರೆಲ್ಲರಿಗೂ 'ವಾಚಕರವಾಣಿ'ಯಾಯಿತು, 'ಓದುಗರ ಒಣಿ'ಯಾಯಿತು, ಇದರಿಂದ ಹೊಸಹೊಸ ಬರಹಗಾರರು, ಕವಿಗಳು, ವಿಡಂಬನಕಾರರು ಹುಟ್ಟಿಕೊಂಡರು. ಇದು ಕನ್ನಡದ ಪಾಲಿಗಂತೂ ಒಂದು ಅದ್ಭುತ ಬೆಳವಣಿಗೆ. ಪತ್ರಿಕಾ ಸಂಪಾದಕರ ಮರ್ಜಿಗೆ ಕಾದುಕುಳಿತಿದ್ದರೆ, ಪಾಪ, ಈ ಬರಹಗಾರರು, ಕತೆಗಾರರು, ಕವಿಗಳು, ಕಲಾವಿದರಿಗೆ ಸರಿಯಾದ ವೇದಿಕೆಯಾಗಲಿ, ಅವಕಾಶವಾಗಲಿ ಸಿಗುತ್ತಿರಲಿಲ್ಲ. ಈ ಅರಳುವ, ಅರಳಿದ ಪ್ರತಿಭೆಗಳೆಲ್ಲ ಕಮರಿ ಹೋಗುತ್ತಿದ್ದವು. ಈ ಫೇಸ್‌ಬುಕ್‌ನಿಂದಾಗಿ ಹೊಸ ಬರಹಗಾರರು, ಕವಿಗಳು, ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರು ಹುಟ್ಟಿಕೊಂಡರು. ತಮ್ಮ ಮನೆಗೆ ಮಾತ್ರ ಸೀಮಿತವಾಗಿದ್ದ ಗೃಹಿಣಿಯರಿಗೂ ಫೇಸ್‌ಬುಕ್ ಹೊಸ ವೇದಿಕೆ ಒದಗಿಸಿಕೊಟ್ಟಿತು.

ನನಗೆ ಹಲವು ಸಲ ಅನಿಸಿದೆ, ಕನ್ನಡ ಪತ್ರಿಕೆಗಳ ಸುದ್ದಿಮನೆಗಳಲ್ಲಿ ಇರುವವರಿಗಿಂತ ಚೆಂದವಾಗಿ, ಫೇಸ್‌ಬುಕ್‌ನಲ್ಲಿರುವ ಈ ಸ್ವತಂತ್ರ ಬರಹಗಾರರು ಬರೆಯುತ್ತಾರೆ. ಇವರು ಪತ್ರಕರ್ತರಿಗಿಂತ ಚೆಂದವಾಗಿ ಸುದ್ದಿ, ವರದಿ, ವಿಶ್ಲೇಷಣೆ, ಲೇಖನ, ತನಿಖಾ ವರದಿ, ಆಳ ವರದಿ, ನುಡಿಚಿತ್ರ, ಮಾನವೀಯ ಆಸಕ್ತ ವರದಿಗಳನ್ನು ಬರೆಯುತ್ತಾರೆ. ಪತ್ರಕರ್ತರಿಗಿಂತ ಚುರುಕಾಗಿ ವರ್ತಿಸುತ್ತಾರೆ. ಪತ್ರಕರ್ತರಿಗಿಂತ ಕ್ರಿಯಾಶೀಲರಾಗಿ ಘಟನಾಸ್ಥಳಗಳಲ್ಲಿ ಇರುತ್ತಾರೆ. 'ರವಿ ಕಾಣದ್ದನ್ನು ಕವಿ ಕಂಡ, ಅವನಿಗೂ ಕಾಣದ್ದು ಪತ್ರಕರ್ತ ಕಂಡ' ಎಂಬ ಮಾತನ್ನು ಫೇಸ್‌ಬುಕ್ ಬರಹಗಾರರು ನಿಜ ಮಾಡಿದ್ದಾರೆ. ಫೇಸ್‌ಬುಕ್‌ನಲ್ಲಿ ಪ್ರಕಟವಾಗಿ, ಚರ್ಚೆ, ಚರ್ವಿತ, ಚರ್ವಣವಾದ ಎಷ್ಟೋ ಗಂಟೆಗಳ ನಂತರ, ಪತ್ರಿಕೆಗಳಲ್ಲಿ ಘಟನೆ ನಡೆದ ಸುದ್ದಿ ವರದಿಯಾಗುತ್ತದೆ. ಮಾಜಿ ಸಚಿವ, ಶಾಸಕ ಎಚ್.ವಿಶ್ವನಾಥ ತಮ್ಮ ಸಮುದಾಯದ ಸ್ವಾಮಿಜಿ ವಿರುದ್ಧ ಆಡಿದ ಮಾತುಗಳ ಬಗ್ಗೆ ಫೇಸ್‌ಬುಕ್‌ನಲ್ಲಿ ಬಿಸಿಬಿಸಿ ಚರ್ಚೆಯಾಗಿ ಅದೇ ದಿನ ವಿಷಯವೇ ಸತ್ತುಹೋದ ಬಳಿಕ ಮರುದಿನ 'ಸ್ವಜಾತಿ ಸ್ವಾಮಿಜಿ ವಿರುದ್ಧ ವಿಶ್ವನಾಥ ಗರಂ' ಎಂಬ ಸುದ್ದಿ ಪ್ರಕಟವಾಗುವುದನ್ನು ನೋಡಿದರೆ, ಪತ್ರಕರ್ತರು ಎಂಥ ಗಾಢ ನಿದ್ದೆಯಲ್ಲಿದ್ದಿರಬೇಕು ಎಂದು ಸಂದೇಹ, ಸಂಕಟ ಕಾಡುತ್ತದೆ. ಇದೇ ವಿಷಯದ ಬಗ್ಗೆ ಫೇಸ್‌ಬುಕ್‌ನಲ್ಲಿ ನಡೆದ ಚರ್ಚೆಯಲ್ಲಿ 1018 ಮಂದಿ ಕಾಮೆಂಟ್ ಮಾಡಿದ್ದರು. ಅಂದರೆ ಈ ವಿಷಯ, ವಿವಾದ ಎಲ್ಲಾ ಮಗ್ಗಲುಗಳೂ ಅಂದೇ ಚರ್ಚೆಯಾಗಿಬಿಟ್ಟಿತ್ತು.

ಇಂದು ಯಾರೂ ಪತ್ರಕರ್ತರಿಗಾಗಿ ಕಾಯುವುದಿಲ್ಲ. ಅವರ ಮರ್ಜಿಗೂ ಕಾಯುವುದಿಲ್ಲ. ತಾವು ಹೇಳಬೇಕಿರುವುದನ್ನು ಟ್ವೀಟ್ ಮಾಡುತ್ತಾರೆ, ಫೇಸ್‌ಬುಕ್‌ನಲ್ಲಿ ಬರೆಯುತ್ತಾರೆ, ಫೇಸ್‌ಬುಕ್ ಲೈವ್‌ನಲ್ಲಿ ಸಾಕ್ಷಾತ್ ಹೇಳುತ್ತಾರೆ. ಇನ್ನೂ ಹೊಸ ಮಾಧ್ಯಮಗಳಿಗೆ ತೆರೆದುಕೊಳ್ಳದವರು ಮಾತ್ರ ಇಂದಿಗೂ ಪತ್ರಿಕಾಗೋಷ್ಠಿ ಕರೆಯುತ್ತಿದ್ದಾರೆ. ಪತ್ರಿಕಾ ಹೇಳಿಕೆ, ಪ್ರಕಟಣೆಗೆ ಕೊಡುತ್ತಿದ್ದಾರೆ. ಉಳಿದವರು ಪತ್ರಕರ್ತರ ಮರ್ಜಿ ಕಾಯುವುದು ಬಿಟ್ಟು ಬಹಳ ದಿನಗಳಾದವು. ಹಾಗೆ ನೋಡಿದರೆ, ಪತ್ರಕರ್ತರೇ ಅವರ ಮರ್ಜಿ ಕಾಯುವಂತಾಗಿದೆ.

ಕೆಲವು ಪತ್ರಕರ್ತರು ಬರದೇ ಪತ್ರಿಕಾಗೋಷ್ಠಿಯೇ ಆರಂಭವಾಗುತ್ತಿರಲಿಲ್ಲ. ಗೋಷ್ಠಿಯನ್ನು ಕರೆದವರು ಅವರಿಗಾಗಿ ಅರ್ಧ, ಮುಕ್ಕಾಲು ಗಂಟೆ ಕಾಯುತ್ತಿದ್ದರು. ಈಗ ಆ ಸಂಪ್ರದಾಯ ನಿಂತು ಹೋಗಿದೆ. ಒಬ್ಬ ರಾಜಕಾರಣಿಗೋ, ಮಂತ್ರಿಗೋ ಏನೋ ಹೇಳಬೇಕೆಂದಿದೆಯೆಂದರೆ, ಅವರು ಮೊಬೈಲ್‌ನಲ್ಲಿ ಫೇಸ್‌ಬುಕ್ ಲೈವ್ ಮಾಡಿಕೊಂಡು ಹೇಳುತ್ತಾರೆ. ಪತ್ರಕರ್ತರು, ಟಿವಿ ವರದಿಗಾರರು ಅದನ್ನು ನೋಡಿ ಸುದ್ದಿ ಮಾಡುವಂತಾಗಿದೆ. ಕೆಲವು ದಿನಗಳ ಹಿಂದೆ, ಕೇಂದ್ರ ಸಚಿವ ರಾಜವರ್ಧನ್ ರಾಥೋಡ್ ಅವರು ತಮ್ಮ ಕಚೇರಿಯಲ್ಲಿ 'ಪುಶ್ ಅಪ್' ವ್ಯಾಯಾಮ ಮಾಡಿ ಅದನ್ನು(ವಿಡಿಯೋಕ್ಲಿಪ್) ಟ್ವಿಟರ್‌ನಲ್ಲಿ ಅಪ್‌ಲೋಡ್ ಮಾಡಿ, ಭಾರತ ಕ್ರಿಕೆಟ್ ತಂಡದ ಕ್ಯಾಪ್ಟನ್ ವಿರಾಟ್ ಕೊಹ್ಲಿ ಕೂಡ ಹೀಗೆ ಮಾಡಲಿ ಎಂದು Fitness challenge ಹ್ಯಾಷ್‌ಟ್ಯಾಗ್ ಹಾಕಿ, ಟ್ವೀಟ್ ಮಾಡಿದರು. ಅದು ಏಕಾಏಕಿ ವೈರಲ್ ಆಯಿತು. ದೇಶದ ಪ್ರಧಾನಿಯೂ ಈ ಸವಾಲನ್ನು ಸ್ವೀಕರಿಸಿ, ಯೋಗ ಮಾಡಿದರು. ಒಂದು ತಿಂಗಳು ಎಲ್ಲೆಡೆಯೂ ಈ ಫಿಟ್ನೆಸ್ ಛಾಲೆಂಜ್ ಬಗ್ಗೆಯೇ ಮಾತು. ಕನ್ನಡದ 'ಸುವರ್ಣ ನ್ಯೂಸ್ ಚಾನೆಲ್'ನ ಆ್ಯಂಕರ್‌ಗಳೂ ದೇಹದಂಡಿಸಿದರು. ಕೂಡ್ಲಿಗಿಯ ಗ್ರಾಮ ಪಂಚಾಯಿತಿ ಸದಸ್ಯೆಯೂ ಕಲ್ಲು ಎತ್ತಿ ಫಿಟ್ನೆಸ್ ಸವಾಲು ಸ್ವೀಕರಿಸಿದಳು.

ಅಂದರೆ ಇಂದು ಸುದ್ದಿ ಮಾಡುವ ಪರಮಾಧಿಕಾರ ಇತ್ತಲ್ಲ, ಅದು ಪತ್ರಕರ್ತರಿಂದ ಹಾಗೂ ಸಂಪಾದಕರಿಂದ ಹೊರಟು ಹೋಗಿದೆ. ಅವರ ತಲೆಮೇಲಿದ್ದ 'ಬ್ರಹಸ್ಪತಿ' ಕಿರೀಟವೂ ಹೊರಟುಹೋಗಿದೆ. ಪತ್ರಕರ್ತರು ಹೇಳಿದ್ದು, ನಿರ್ಧರಿಸಿದ್ದು ಮಾತ್ರ ಸುದ್ದಿ ಅಲ್ಲ. ಅಂದರೆ ಇಷ್ಟು ವರ್ಷ ಅವರ ಬಳಿ ಇದ್ದ ಮಂತ್ರದಂಡವನ್ನು ಕಸಿದುಕೊಳ್ಳಲಾಗಿದೆ. ನಾಳಿನ ಪತ್ರಿಕೆಯಲ್ಲಿ ಯಾವುದು ಸುದ್ದಿಯಾಗಬೇಕು ಎಂಬುದನ್ನು ನಿರ್ಧರಿಸುವವರು ಬೇರೆ ಯಾರೋ.

ಕೆಲವು ವರ್ಷಗಳ ಹಿಂದಿನವರೆಗೂ ಪತ್ರಿಕೆಗಳಿಗೆ ಬರೆಯುವ ಲೇಖಕರು, ಅಂಕಣಕಾರರು ಕೆಲವೇ ಕೆಲವು ಮಂದಿಯಿದ್ದರು. ಒಂದೊಂದು ಪತ್ರಿಕೆಗೆ ಹತ್ತಾರು ಅಂಕಣಕಾರರು 'ಆಸ್ಥಾನ ವಿದ್ವಾಂಸ'ರ ಮಾದರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಅವರು ಅಭಿಪ್ರಾಯ, ನೀತಿಗಳನ್ನು ರೂಪಿಸುವ, ಜನಾಭಿಪ್ರಾಯ ನಿರ್ದೇಶಿಸುವ ಮಾರ್ಗದರ್ಶಿಗಳೂ ಆಗಿದ್ದರು. ಇಂಥ ಅಂಕಣಕಾರರು ಕೆಲವು ಪತ್ರಿಕೆಗಳಿಗೆ ತಮ್ಮ ಸ್ವಂತ ಆಸ್ತಿಯೇನೋ ಎಂಬಂತೆ ಹದಿನೈದು-ಇಪ್ಪತ್ತು ವರ್ಷ ಅಂಟಿಕೊಂಡಿದ್ದರು. ಈ 'ಸ್ಥಾನಮಾನ'ದ ಬಲದಿಂದ, ಇವರು ಅಧಿಕಾರ ಸ್ಥರದಲ್ಲಿ ತಮ್ಮ ಕೆಲಸ-ಕಾರ್ಯ ನೆರವೇರಿಸಿಕೊಳ್ಳುವುದರ ಜತೆಗೆ ಲಾಭದಾಯಕ ಹುದ್ದೆಗಳಿಗೆ ತಗುಲಿಕೊಳ್ಳುತ್ತಿದ್ದರು. ಕುಲ್ದೀಪ್ ನಯ್ಯರ್, ಪ್ರೀತೀಶ್ ನಂದಿ, ಸ್ವಾಮಿನಾಥನ್ ಎ. ಅಯ್ಯರ್, ಶೋಭಾ ಡೇ, ಗುರುಚರಣ್ ದಾಸ್, ಸ್ವಪನ್ ದಾಸ್‌ಗುಪ್ತಾ, ಸಂತೋಷ ದೇಸಾಯಿ ಮುಂತಾದವರು ಕಳೆದ ಇಪ್ಪತ್ತು ವರ್ಷಗಳಿಂದ ಒಂದೊಂದು ಪತ್ರಿಕೆಗಳನ್ನು ಹಿಡಿದುಕೊಂಡು ಜಟಗದೇವರಂತೆ ಸ್ಥಾಪಿತರಾಗಿಬಿಟ್ಟಿದ್ದಾರೆ. ಇವರು ತಮ್ಮ ಅಂಕಣವನ್ನು ಹೇಗೆ ಆರಂಭಿಸಿ, ಹೇಗೆ ಮುಗಿಸುತ್ತಾರೆ, ಇವರ ಒಲವು-ನಿಲುವುಗಳೇನು, ಇವರಿಗೆ ಇಷ್ಟವಾದ ನಾಯಕರ್‍ಯಾರು, ಯಾರನ್ನು ಕಂಡರೆ ಆಗೊಲ್ಲ ಹೀಗೆ ಇವರ ಜಾತಕಗಳನ್ನೆಲ್ಲ ಹೇಳಿಬಿಡಬಹುದು. ಆಯಾ ಪತ್ರಿಕೆಯ ಸಂಪಾದಕರು ಇವರನ್ನು ಇಷ್ಟು ವರ್ಷಗಳಿಂದ ಯಾಕೆ ಸಹಿಸಿಕೊಂಡಿದ್ದಾರೆ, ಕಾಲಕಾಲಕ್ಕೆ ಸಂಪಾದಕರು ಬದಲಾದರೂ, ಇವರು ಮಾತ್ರ 'ಜಟಗದೇವ'ರಾಗಿ ಹೇಗೆ ಉಳಿದುಕೊಂಡಿದ್ದಾರೆ ಎಂಬುದು ನಿಗೂಢವೇ.

ಕಳೆದ ಐದಾರು ವರ್ಷಗಳಲ್ಲಿ ಫೇಸ್‌ಬುಕ್‌ನಿಂದಾಗಿ ಹೊಸಹೊಸ ಆಲೋಚನೆ, ನಿಲುವು, ಚಿಂತನೆ, ಸೃಜನಶೀಲತೆ, ವಿಶಿಷ್ಟಗುಣ, ಕ್ರಿಯಾಶೀಲತೆ, ಸೊಗಡು, ಹವ್ಯಾಸ, ತುರುಸು, ಬಿನ್ನಾಣಗಳ ಲೇಖಕ-ಲೇಖಕಿಯರು ಹುಟ್ಟಿಕೊಂಡಿದ್ದಾರೆ. ಮುಂಜಾನೆಯ ಇಬ್ಬನಿಯಂಥ ತಾಜಾತನ ಇವರೆಲ್ಲರ ಬರಹಗಳ ಮೂಲ ಲಕ್ಷಣ. ಮೊನಚು, ವ್ಯಂಗ್ಯ, ಅಧ್ಯಯನ, ಸಂಶೋಧನೆ, ಹೊಸ ಭಾಷೆ, ಆಧುನಿಕ ನುಡಿಗಟ್ಟುಗಳಿಂದ ಬರೆಯುವ ಈ ಹವ್ಯಾಸಿ ಲೇಖಕರು ಯಾರ ಮುಲಾಜಿಗೂ ಒಳಗಾಗದೇ, ಯಾರನ್ನೋ ಮೆಚ್ಚಿಸಲು ಲೇಖನವನ್ನು ಅಡ ಇಡದೇ, ಅನಿಸಿದ್ದನ್ನು ಚೆಂದವಾಗಿ ಬರೆಯುವ ಮೂಲಕ ಅಸಂಖ್ಯ ಅಭಿಮಾನಿಗಳನ್ನು ಸಂಪಾದಿಸಿಕೊಂಡಿದ್ದಾರೆ. ಕನ್ನಡದಲ್ಲಂತೂ ಈ ಫೇಸ್‌ಬುಕ್ ಬರಹಗಾರರು ಹೊಸ ಅಲೆಯನ್ನೇ ಸೃಷ್ಟಿಸಿದ್ದಾರೆ. ಅವರು ಯಾರನ್ನೂ ಬಿಡುತ್ತಿಲ್ಲ. ಮುಖ್ಯಮಂತ್ರಿಯಾಗಲಿ, ಪತ್ರಿಕಾ ಸಂಪಾದಕರಾಗಲಿ, ಕನ್ನಡ ನಟರಿರಲಿ, ಕನ್ನಡ ಹೋರಾಟಗಾರರಾಗಿರಲಿ, ಯಾರನ್ನೂ ಇವರು ಬಿಡುತ್ತಿಲ್ಲ. ತಪ್ಪುಗಳನ್ನು ಕಂಡರೆ ಖಂಡಿಸುವ ಎದೆಗಾರಿಕೆ, ನೇರವಂತಿಕೆ ರೂಢಿಸಿಕೊಂಡಿದ್ದಾರೆ. ಪತ್ರಿಕೆಗಳು ಮಾಡುವ ತಪ್ಪುಗಳನ್ನು ಎತ್ತಿತೋರಿಸಲು ಹೆದರುತ್ತಿದ್ದ, ಪತ್ರಕರ್ತರು ಮಾಡುವ ಪ್ರಮಾದ, ಭ್ರಷ್ಟಾಚಾರವನ್ನು ಕಂಡೂ ಕಾಣದಂತೆ ಇರುತ್ತಿದ್ದ ಅಥವಾ ಹೇಳಲು ಹೆದರುತ್ತಿದ್ದವರು ಫೇಸ್‌ಬುಕ್ ಮೂಲಕ ಅವರೆಲ್ಲರನ್ನೂ ಹರಾಜು ಹಾಕುತ್ತಿರುವುದರಿಂದ ಮಾಧ್ಯಮದವರೂ ಟೀಕಾತೀತರಲ್ಲ ಎಂಬುದನ್ನು ಸಾರಿದಂತಾಗಿದೆ.

ಇದರಿಂದ ಒಂದು ಸಂಗತಿ ಸ್ಪಷ್ಟ. ಮಾಧ್ಯಮವೆಂದರೆ Holy Cow ಎಂಬ ಭಾವನೆಯಿತ್ತು. ಅನಗತ್ಯ ಭಯವಿತ್ತು. ಈಗ ಅದು ಸ್ವಲ್ಪಮಟ್ಟಿಗೆ ತಿಳಿಯಾಗಿದೆ. ಪತ್ರಕರ್ತರೂ ಟೀಕೆಗೆ, ವಿಮರ್ಶೆಗೆ ಗುರಿಯಾಗುತ್ತಿದ್ದಾರೆ. ಅಷ್ಟೇ ಅಲ್ಲ, ಪತ್ರಕರ್ತರನ್ನು ವೇಶ್ಯೆಯರಿಗೆ(Prostitutes) ಸಮಾನಾಂತರವಾಗಿ ಹೋಲಿಸಿ Prestitutes ಎಂದು ಗೇಲಿ ಮಾಡುವ ಹಂತವನ್ನು ತಲುಪಿದೆ. ಸಂಪಾದಕೀಯ ವಿಭಾಗ ಅಥವಾ ಪತ್ರಿಕೆಯ ಗರ್ಭಗುಡಿ(Sanctum Sanctorum)ಯ ಪಾವಿತ್ರ್ಯ ಲೆಕ್ಕಿಸದೇ ಟೀಕಿಸಲಾಗುತ್ತಿದೆ. ಪತ್ರಕರ್ತರು ಮಾಡುವ ಸಣ್ಣತಪ್ಪುಗಳನ್ನು ಸಹ ಫೇಸ್‌ಬುಕ್ ಬರಹಗಾರರು ಕ್ಷಮಿಸುವುದಿಲ್ಲ. ಪತ್ರಿಕೆಗಳಲ್ಲಿ ಕಂಡುಬರುವ ಸಣ್ಣಪುಟ್ಟ ದೋಷಗಳೂ ಗೇಲಿಗೊಳಗಾಗುತ್ತವೆ. ವರದಿಗಾರರೇನಾದರೂ ಕೃತಿಚೌರ್ಯ ಮಾಡಿದರೆ ಕಂಡಲ್ಲಿ ಗುಂಡು!

ಸಾಮಾನ್ಯವಾಗಿ ಒಂದು ಮಾಧ್ಯಮ ಸಂಸ್ಥೆ ಹಾಗೂ ಆ ಸಂಸ್ಥೆಯ ಪತ್ರಕರ್ತರು ತಪ್ಪು ಮಾಡಿದರೆ, ಶಿಕ್ಷೆಗೊಳಗಾದರೆ ಬೇರೆ ಪತ್ರಿಕೆಗಳಲ್ಲಿ ವರದಿಯಾಗುತ್ತಿರಲಿಲ್ಲ. ಇದು ಒಂಥರಾ ಸ್ವಜಾತಿಪ್ರೇಮ! ಸಾಮಾಜಿಕ ಜಾಲತಾಣಗಳ ಪ್ರಭಾವ ದಿನೇದಿನೆ ಅಧಿಕವಾಗುತ್ತಿರುವಾಗ, ತಪ್ಪು ಮಾಡಿದವರೆಲ್ಲ ಬೆತ್ತಲಾಗುತ್ತಿದ್ದಾರೆ. ಪತ್ರಕರ್ತರಿರಲಿ, ಸಂಪಾದಕರಿರಲಿ, ಮಾಧ್ಯಮ ಸಂಸ್ಥೆ ಮಾಲೀಕರಿರಲಿ, ಎಲ್ಲರೂ ಬಟಾಬಯಲಾಗುತ್ತಿದ್ದಾರೆ.

ಪತ್ರಿಕೆಯಲ್ಲಿ ಸುದ್ದಿಯ ಓದು, ಅನುಭವ ಒಂದು ಸಂಪ್ರದಾಯದಂತೆ, ಬಿಡಲಾಗದ ಚಾಳಿಯಂತೆ, ಮರೆಯಲಾಗದ ಮಧುರ ನೆನಪಿನಂತೆ, ಕೈಜಗ್ಗಿ ಕರೆದರೂ, ಸಾಮಾಜಿಕ ಜಾಲತಾಣದ ಚಬುಕು, ವೇಗ, ಲಕ್ಷಣ, ಗುಣಕಥನ, ವೈಶಿಷ್ಟ್ಯಗಳ ಮುಂದೆ ಪತ್ರಿಕೆಯ ಸೊಬಗು ಸ್ವಲ್ಪಮಟ್ಟಿಗಾದರೂ ಕಳೆಗುಂದಿರುವುದು ದಿಟ. ಹಾಗಂತ ಯಾವ ಪತ್ರಿಕೆಯ ಪ್ರಸಾರ ಕಮ್ಮಿಯಾಗಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಎಲ್ಲ ಪತ್ರಿಕೆಯ ಪ್ರಸಾರ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಲೇ ಇದೆ. ಆದರೆ ಅಪಾಯದ ಸಂಕೇತಗಳು, ಅಡ್ಡವಾಸನೆ ಮಾತ್ರ ಹೊಡೆಯಲಾರಂಭಿಸಿದೆ.

ಇದು ಪತ್ರಕರ್ತರಿಗೆ ಮೈಕೊಡವಿಕೊಳ್ಳುವ ಸಮಯ. ಇನ್ನಾದರೂ ಮೊಹರೆ ಹನುಮಂತರಾಯರು, ಶಾಮರಾಯರು, ಟಿಯೆಸ್ಸಾರ್, ಖಾದ್ರಿ ಶಾಮಣ್ಣನವರ ಪೊರೆಯಿಂದ ಕಳಚಿಕೊಂಡು ಹೊಸ ಹುರುಪು, ಈಗಿನ ಕಾಲಕ್ಕೆ ತಕ್ಕುದಾದ ರೀತಿಯಲ್ಲಿ, ಬದಲಾದ ಓದುಗರ ಅಭಿರುಚಿಗೆ ತಕ್ಕಂತೆ ಪತ್ರಿಕೆ ರೂಪಿಸಬೇಕಾಗಿದೆ. ಪತ್ರಿಕೆಯ ತುಂಬಾ ಭಾಷಣಗಳ 'ಒದರಿ'ಗಾರಿಕೆಯೇ ತುಂಬಿರುತ್ತವೆ. 30-40 ವರ್ಷಗಳ ಹಿಂದಿನ ಪತ್ರಿಕೆಗಳಿಗೂ, ಈಗಿನ Speech reportingಗೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಓದುಗರನ್ನು ಜಾಗೃತಗೊಳಿಸಬೇಕಾದ ಪತ್ರಿಕೆಗಳೇ ಈಗ ಓದುಗರಿಂದ ಜಾಗೃತಿಗೊಳ್ಳಬೇಕಾಗಿ ಬಂದಿರುವುದು ಕಟುವಾಸ್ತವ, ಕಹಿಸತ್ಯ. ನಾವು ಏನೇ ಕೊಟ್ಟರೂ ಅದನ್ನು ಸ್ವೀಕರಿಸುವ, ಒಪ್ಪುವ ಮನಸ್ಥಿತಿಯಲ್ಲಿ ಓದುಗರಿಲ್ಲ. ಓದುಗರ ಮುಂದೆ ಹಲವು ಆಯ್ಕೆಗಳಿವೆ. ಪತ್ರಿಕೆಗಳೊಂದೇ ಜ್ಞಾನವಾಹಿನಿಗಳಲ್ಲ, ಸುದ್ದಿಯ ಮೂಲವೂ ಅಲ್ಲ. ಈಗಾಗಲೇ ನಮ್ಮನ್ನು ಓವರ್‌ಟೇಕ್ ಮಾಡಿದ ಓದುಗರನ್ನು ಹಿಂದಕ್ಕೆ ಹಾಕದಿದ್ದರೆ, ಪತ್ರಿಕೆ, ಪತ್ರಕರ್ತರು ಪ್ರಸ್ತುತತೆ ಕಳೆದುಕೊಳ್ಳುವ ದಿನ ದೂರವಿಲ್ಲ.

ಹೇಳೋದನ್ನು ಇಷ್ಟು ನೇರಾನೇರ ಹೇಳಬಾರದಿತ್ತಾ, ಗೊತ್ತಿಲ್ಲ!

ಥಾಯ್ ರೆಸ್ಕ್ಯೂ ಆಪರೇಶನ್‌ನಿಂದ ನಾವು ಕಲಿಯಬೇಕಾಗಿದ್ದೇನು?

ಷರಾ

ಗೀರ್ವಾಣಿ

editoped@vishwavani.news

ಆ ಮಕ್ಕಳು ಥಾಯ್‌ಲ್ಯಾಂಡ್‌ನ ಗುಹೆಯಲ್ಲಿ ಸಿಲುಕಿದ್ದೇ ಒಳ್ಳೆಯದಾಯಿತು! ಭಾರತದ ಗುಹೆಯಲ್ಲಿ ಸಿಲುಕಿಕೊಳ್ಳಲಿಲ್ಲವಲ್ಲ.. ಕಳೆದ ನಾಲ್ಕು ದಿನಗಳಿಂದ ಥಾಯ್ ರೆಸ್ಕ್ಯೂ ಆಪರೇಶನ್ ನಡೆಯುತ್ತಿದ್ದಾಗ ಪದೇಪದೆ ಹೀಗೆ ಅನಿಸಿದ್ದು ಸುಳ್ಳಲ್ಲ. ಸತತ ಕಾರ್ಯಾಚರಣೆ ಮೂಲಕ 12 ಮಕ್ಕಳು ಹಾಗೂ ಕೋಚ್ ಹೊರಬಂದಾಗ ಸಂತೋಷದ ಜತೆಗೆ ನಮ್ಮ ಕೊಳವೆ ಬಾವಿಗಳಲ್ಲಿ ಬಿದ್ದು ಸತ್ತ ಹತಭಾಗ್ಯ ಮಕ್ಕಳ ನೆನಪಾಗಿ ಹೊಟ್ಟೆ ಉರಿಯಿತು. ಇದು ನಮ್ಮ ದೇಶದಲ್ಲೇ ಆಗಿದ್ದರೆ ಏನಾಗುತ್ತಿತ್ತು? ಟಿವಿಗಳಲ್ಲಿ ಬ್ರೇಕಿಂಗ್ ನ್ಯೂಸ್ ಬರಲು ಶುರುವಾಗುತ್ತಿತ್ತು. ಬೆಳಗಿನಿಂದ ಸಂಜೆವರೆಗೆ ಕಾರ್ಯಾಚರಣೆಯ ದೃಶ್ಯಗಳನ್ನು ಪ್ರಸಾರ ಮಾಡುತ್ತಿದ್ದರು. ಇನ್ನು ಕಾರ್ಯಾಚರಣೆ ಸ್ಥಳದಲ್ಲಿ ಜನ ಸೇರಿ, ದೊಂಬಿಯಾಗಿ ಲಾಟಿ ಚಾರ್ಜ್ ನಡೆಯುತ್ತಿತ್ತು. ಅರೆ ಮಿಲಿಟರಿ ಪಡೆ ಬಂದಿಳಿಯುತ್ತಿತ್ತು. ಕಾರ್ಯಾಚರಣೆಗೆ ಮಳೆ ಅಡ್ಡಿಯಾಯಿತು ಎಂದು ನಿಲ್ಲಿಸುತ್ತಿದ್ದರು. ಇಲ್ಲವೇ ಯಾವುದೋ ಮೆಷಿನ್ ವಿದೇಶದಿಂದ ಬರಬೇಕು ಎಂದು ಕಾಯುತ್ತಿದ್ದರು. ಅಂತೂ ಇಂತೂ ರಕ್ಷಣಾ ಕಾರ್ಯ ಶುರುವಾಗಲು ಎರಡು ದಿನ ತೆಗೆದುಕೊಂಡು, ಗುಹೆಯ ಇನ್ನೊಂದು ಕಡೆಯಿಂದ ಸುರಂಗ ತೋಡಲು ಶುರು ಮಾಡುತ್ತಿದ್ದರು. ಕೊನೆಗೆ ಮಣ್ಣು ಒಳಗಿದ್ದವರ ತಲೆ ಮೇಲೆಯೇ ಬಿದ್ದು ಅವರು ಅಲ್ಲೇ ಜೀವಂತ ಸಮಾಧಿಯಾಗುತ್ತಿದ್ದರು. ನ್ಯೂಸ್ ಚಾನೆಲ್‌ನವರಿಗೆ ಒಂದಿಷ್ಟು ಟಿಆರ್‌ಪಿ ಜಾಸ್ತಿಯಾದರೆ, ಅಲ್ಲೇ ಸುತ್ತ ಇದ್ದ ಟೀ ಅಂಗಡಿಯವ ಒಳ್ಳೆ ವ್ಯಾಪಾರ ಮಾಡಿಕೊಳ್ಳುತ್ತಿದ್ದ. ಟ್ರ್ಯಾಕ್ಟರ್, ಟಿಪ್ಪರ್ ಬಾಡಿಗೆ ಕೊಟ್ಟವರೂ ಹಣ ಎಣಿಸುತ್ತಿದ್ದರು. ಕೊನೆಗೆ ಮಕ್ಕಳ ಶವ ತೆಗೆಯುವ ಕಾರ್ಯ ಶುರುವಾಗುತ್ತಿತ್ತು. ಪೋಷಕರು ಗೋಳು ಕರುಳು ಹಿಂಡುವಂತಿರುತ್ತಿತ್ತು. ಅಂತೂ ಒಂದೊಂದೇ ಮಕ್ಕಳ ಶವ ಹೊರಗೆ ಬಂದು, ಕೊನೆಗೆ ಟಿವಿಗಳಲ್ಲಿ ಮತ್ತೆ ಪ್ಯಾನಲ್ ಡಿಸ್ಕಶನ್ ಶುರುವಾಗುತ್ತಿತ್ತು. ಆರ್ನಬ್ ಅರಚಾಡುತ್ತಾ ಕೇಳುತ್ತಿದ್ದ, ಇಂಡಿಯಾ 'ವಾಂಟ್ಸ್ ಟು ನೋ' ಎಂದು. ಮುಂದಿನ ಎರಡು ದಿನಕ್ಕೆ ಎಲ್ಲ ತಣ್ಣಗಾಗುತ್ತಿತ್ತು. ಆ ಗುಹೆ ಇನ್ನೊಂದಿಷ್ಟು ಬಲಿ ಪಡೆಯಲು ಬಾಯಿ ತೆರೆದುಕೊಂಡು ಹಾಗೇ ಕೂತಿರುತ್ತಿತ್ತು. ಇದು ನಮ್ಮ ದೇಶ ವಿಪತ್ತುಗಳನ್ನು ನಿಭಾಯಿಸುವ ರೀತಿ. ಇದನ್ನು ಕಲ್ಪಿಸಿಕೊಳ್ಳಲೂ ಸಂಕಟವಾಗುತ್ತಿದೆ. ವಾಸ್ತವವೇನೆಂದರೆ, ಅದೇ ಘಟನೆ ನಮ್ಮಲ್ಲಿ ಸಂಭವಿಸಿದ್ದರೆ ಖಂಡಿತಾ ಸನ್ನಿವೇಶ ಇದಕ್ಕಿಂತ ಬೇರೆ ಆಗುತ್ತಿರಲಿಲ್ಲ.

ಆದರೆ ಥಾಯ್ ನಿಜಕ್ಕೂ ಜಗತ್ತಿಗೆ ಮಾದರಿಯಾಗಿ ನಿಂತಿತು. ತನ್ನ ನೆಲದ ಒಂದೊಂದು ಜೀವವೂ ತನಗೆಷ್ಟು ಮುಖ್ಯ ಎಂಬುದನ್ನು ತೋರಿಸಿಕೊಟ್ಟಿತು. ಎಲ್ಲಕ್ಕಿಂತ ಒಂದು ವಿಪತ್ತನ್ನು ಅತ್ಯಂತ ಸೆನ್ಸಿಬಲ್ ಆಗಿ ಹೇಗೆ ನಿಭಾಯಿಸಬೇಕು ಎಂಬುದಕ್ಕೆ ಉದಾಹರಣೆಯಾಯಿತು. ಹಾಗಾದರೆ ಥಾಯ್ ರೆಸ್ಕ್ಯೂ ಆಪರೇಶನ್‌ನಿಂದ ನಾವು ಕಲಿಯಬೇಕಾಗಿದ್ದೇನು? ಮೊಟ್ಟ ಮೊದಲನೆಯದಾಗಿ ಸೂಕ್ಷ್ಮಗಳನ್ನು ಮನಗಾಣುವ ರೀತಿ, ಚೂರೂ ಯಡವಟ್ಟಾಗದಂತೆ ಕಾರ್ಯಾಚರಣೆ ರೂಪಿಸಿದ ರೀತಿ, ಅದಕ್ಕೆ ಬೇಕಾದ ತಯಾರಿ, ಮುಂಜಾಗ್ರತೆ, ಆಧುನಿಕ ಸಲಕರಣೆ ಹಾಗೂ ತಂತ್ರಜ್ಞಾನಗಳನ್ನು ಬಳಸಿಕೊಂಡ ರೀತಿ, ಮಕ್ಕಳ ಮನಸ್ಥಿತಿಯನ್ನು ಅರಿತು ನಡೆದುಕೊಂಡ ರೀತಿ ಒಂದೊಂದೂ ಅನನ್ಯ. ಮಕ್ಕಳು ಗುಹೆಯಲ್ಲಿ ಸಿಲುಕಿದ್ದಾರೆ ಎಂದು ಮನವರಿಕೆಯಾಗುತ್ತಿದ್ದಂತೆಯೇ ಲಂಡನ್‌ನಿಂದ ಮುಳುಗು ತಜ್ಞರನ್ನು ಕರೆಸಿಕೊಂಡಿತು. ನಮ್ಮಲ್ಲಿಯಾಗಿದ್ದರೆ ಲಂಡನ್ ಅದಾಗೇ ಸಹಾಯಕ್ಕೆ ಮುಂದೆ ಬಂದಿದ್ದರೂ ನಾವು ಒಣ ಸ್ವಾಭಿಮಾನ ತೋರಿಸಿ ನಿರಾಕರಿಸುತ್ತಿದ್ದೆವು. ಮಕ್ಕಳು ಜೀವಂತವಾಗಿದ್ದಾರೆ ಎಂಬುದು ತಿಳಿಯುತ್ತಿದ್ದಂತೆ ಲಂಡನ್, ಚೀನಾ, ಮಯನ್ಮಾರ್,ಅಮೆರಿಕ, ಲಾವೋಸ್, ಆಸ್ಟ್ರೇಲಿಯಾ, ಜಪಾನ್ ಥರದ ದೇಶಗಳು ಸಹಾಯಕ್ಕೆ ಮುಂದೆ ಬಂದವು. ಥಾಯ್ ಸರಕಾರ ಅದ್ಯಾವುದನ್ನೂ ತಿರಸ್ಕರಿಸಲಿಲ್ಲ. ಎಲ್ಲ ದೇಶಗಳ ಪರಿಣತರ ಸಲಹೆಗಳನ್ನು ಚಾಚೂ ತಪ್ಪದೇ ಪಾಲಿಸತೊಡಗಿತು. ಸುಮಾರು 90 ಪರಿಣತರು ಗುಹೆಯ ಆಳ, ಅದರಲ್ಲಿ ತುಂಬಿಕೊಂಡ ನೀರಿನ ಪ್ರಮಾಣ, ಮತ್ತೆ ಮಳೆ ಹೊಯ್ದರೆ ನೀರು ಎಷ್ಟು ಮೇಲೇರಬಹುದು? ಮುಂದಿನ ನಾಲ್ಕು ದಿನ ಇನ್ನೆಷ್ಟು ಮಳೆಯಾಗಬಹುದು ಇದನ್ನೆಲ್ಲ ಲೆಕ್ಕ ಹಾಕಿ, ಅತ್ಯಂತ ವ್ಯವಸ್ಥಿತವಾಗಿ ಗುಹೆಯಿಂದ ನೀರನ್ನು ಹೊರ ಹಾಕತೊಡಗಿತು. ಒಂದು ಹಂತದಲ್ಲಿ ಮಕ್ಕಳು ಮಳೆಗಾಲ ಮುಗಿಯುವವರೆಗೂ ಅಲ್ಲೇ ಇರಬೇಕಾಗಬಹುದು, ಅವರಿಗೆ ಬೇಕಾದ ಆಹಾರ ಸಾಮಗ್ರಿ ಒದಗಿಸಿದರಾಯಿತು ಎಂದು ಯೋಚಿಸಿತ್ತು. ಆದರೆ ಗುಹೆಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣ ಕುಸಿಯುತ್ತಿರುವುದು ಹಾಗೂ ನೀರಿನ ಪ್ರಮಾಣ ಏರುತ್ತಿರುವುದನ್ನು ಗಮನಿಸಿ ನೀರನ್ನು ಹೊರ ಹಾಕುವ ತೀರ್ಮಾನಕ್ಕೆ ಬಂತು. ಜುಲೈ 8ರಂದು ಕಾರ್ಯಾಚರಣೆಗಿಳಿದೇ ಬಿಟ್ಟಿತು.

ಹೇಗೆ? ಗುಹೆಯ ದ್ವಾರದಿಂದ 13 ಕಿಮಿ ಒಳಗಿರುವ ಮಕ್ಕಳಿದ್ದಲ್ಲಿವರೆಗೂ ಕೇಬಲ್ ಎಳೆಯಿತು. 90 ಜನರಿದ್ದ ಮುಳುಗು ತಜ್ಞರ ತಂಡ ಕ್ಯಾಮರಾ, ಲೈಟ್, ಆಕ್ಸಿಜನ್ ಮಾಸ್ಕ್, ಆಹಾರ, ಶಕ್ತಿ ಬಾರ್‌ಗಳ ಜತೆ ಮಕ್ಕಳನ್ನು ತಲುಪಿಯೇ ಬಿಟ್ಟಿತು. ಅದೇನೂ ಸುಲಭವಾಗಿರಲಿಲ್ಲ. ಕೇವಲ ಒಬ್ಬ ಮಾತ್ರ ಅತ್ಯಂತ ಸಾಹಸದಿಂದ ಕಲ್ಲಿನ ಪಡಕುಗಳಲ್ಲಿ ತೂರಿ ಹೋಗಬೇಕಿತ್ತು. ಆ ಸಾಹಸದಲ್ಲಿ ಥಾಯ್ ಸೇನೆಯ ಯೋಧ ಮುಳುಗು ಹಾಕಿ ಸಾಗುತ್ತಿದ್ದಾಗ ಆಮ್ಲಜನಕದ ಮಾಸ್ಕ್ ಕೈಕೊಟ್ಟು ಜೀವಬಲಿಕೊಟ್ಟ. ಒಳಗೆ ಹೋಗಿದ್ದ ಒಬ್ಬೊಬ್ಬ ಡೈವರ್ ಕ್ಯಾಮರಾಗಳೂ ಹೊರಗಡೆ ಕಂಟ್ರೋಲ್ ರೂಮಿನ ಜತೆ ಸಂಪರ್ಕ ಹೊಂದಿದ್ದವು. ಹೊರಗಿದ್ದವರಿಗೆ ಒಳಗಿನ ಸಂಪೂರ್ಣ ಚಿತ್ರಣ ಸಿಗುತ್ತಿತ್ತು. ಇವೆಲ್ಲ ಉನ್ನತ ತಂತ್ರಜ್ಞಾನದ ಸಹಾಯ ಎನ್ನಬಹುದು. ಆದರೆ ಮಕ್ಕಳನ್ನು ಅವರು ನಿಭಾಯಿಸಿದ ರೀತಿಯಿದೆಯಲ್ಲ, ಅದು ನಾವು ನೀವೆಲ್ಲ ಕಲಿಯಬೇಕಾಗಿರುವುದು. ಒಳಗಿದ್ದ ಮಕ್ಕಳಿಗೆ ಆಹಾರ ಒದಗಿಸುವುದು ಹಾಗೂ ಅವರ ಮನೋಬಲ ಕುಸಿಯದಂತೆ ನೋಡಿಕೊಳ್ಳುವುದು ಎಲ್ಲಕ್ಕಿಂತ ಚಾಲೆಂಜಿಂಗ್ ಕೆಲಸವಾಗಿತ್ತು. ಅವರಿಗೆ ಸುಲಭಕ್ಕೆ ಜೀರ್ಣವಾಗುವ, ತಕ್ಷಣ ಶಕ್ತಿ ಕೊಡುವ ಆಹಾರ ಒದಗಿಸಲಾಯಿತು. ಅಲ್ಲದೇ ಡೈವಿಂಗ್ ಮಾಡಿಕೊಂಡೇ ಹೊರ ಬರಬೇಕಾದ ಅನಿವಾರ್ಯತೆ ಇದ್ದಿದ್ದರಿಂದ ಒಂದೊಂದು ಮಕ್ಕಳನ್ನು ಇಬ್ಬಿಬ್ಬರು ಸೇರಿ ಕರೆದುಕೊಂಡು ಬರತೊಡಗಿದರು. ಭರವಸೆ ನೀಡುವುದು ಹಾಗೂ ಭದ್ರತಾ ಭಾವನೆ ನೀಡುವುದು ಆ ಕ್ಷಣದ ಅಗತ್ಯವಾಗಿರುತ್ತದೆ. ಅಲ್ಲೆಲ್ಲೂ ಎಡವದೇ, ಗಂಟೆಗಳ ಕಾಲ ಆಪರೇಶನ್ ನಡೆಸಿ ಎಲ್ಲರನ್ನೂ ರಕ್ಷಿಸಲಾಯಿತು. ಮಕ್ಕಳು ಮಾನಸಿಕ ಸ್ಥಿಮಿತ ಕಳೆದುಕೊಳ್ಳಬಾರದು, ಅವರ ಆತ್ಮಬಲ ಕುಸಿಯಬಾರದು ಎಂಬ ಕಾರಣಕ್ಕೆ ಅವರಿಗೆ ಉದ್ವೇಗ ನಿಯಂತ್ರಣ ಔಷಧ ಕೂಡ ನೀಡಲಾಗಿತ್ತು.

ಈಗ ಹೇಳಿ, ಇಷ್ಟೊಂದು ಸೂಕ್ಷ್ಮವಾಗಿ ಇಡೀ ಪ್ರಕರಣವನ್ನು ನಿಭಾಯಿಸುವ ಚಾಕಚಕ್ಯತೆ ನಮ್ಮಲ್ಲಿದೆಯೆ? ನಮಗೆ ಆಂಬುಲೆನ್ಸ್ ಬರುತ್ತಿದ್ದರೆ ಅದಕ್ಕೆ ದಾರಿ ಬಿಡಬೇಕು ಎಂಬ ಸಣ್ಣ ಸೂಕ್ಷ್ಮಗಳೇ ತಿಳಿಯುವುದಿಲ್ಲ. ರಾಜಕಾರಣಿಗಳು ಆ ಮಾರ್ಗದಲ್ಲಿ ಬರುತ್ತಿದ್ದರೆ ಅಧಿಕಾರಿಗಳು ತಾಸುಗಟ್ಟಲೇ ಆಂಬುಲೆನ್ಸ್‌ನ್ನು ದಾರಿಯಲ್ಲೇ ತಡೆದು ನಿಲ್ಲಿಸಿ ಬಿಡುತ್ತಾರೆ. ಈಗ ಅದೆಷ್ಟು ವಿಪರೀತಕ್ಕೆ ಹೋಗಿದೆಯೆಂದರೆ ರಾಜಕಾರಣಿಗಳೇ ಆಂಬುಲೆನ್ಸ್‌ನ್ನು ನಮಗೋಸ್ಕರ ತಡೆದು ನಿಲ್ಲಿಸಬೇಡಿ ಎಂದು ಅಧಿಕಾರಿಗಳಿಗೆ ತಿಳಿ ಹೇಳುವ ಮಟ್ಟಕ್ಕೆ ಹೋಗಿದೆ. ನಮ್ಮಲ್ಲಿನ್ನೂ ಆಂಬುಲೆನ್ಸ್ ಅಡತಡೆಯಿಲ್ಲದೇ ಹೋಗಲು ಒಂದು ಸರಿಯಾದ ವ್ಯವಸ್ಥೆಯಿಲ್ಲ. ಅಪಘಾತವಾಗಿ ರಕ್ತದ ಮಡುವಲ್ಲಿ ಬಿದ್ದು ನೀರು ಕೇಳುತ್ತಿದ್ದರೂ ವಿಡಿಯೋ ಮಾಡುವ ನಿಷ್ಕರುಣೆ ನಮ್ಮದು. ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದರೆ ಅದರ ವಿಡಿಯೋ ಫೇಸ್‌ಬುಕ್‌ನಲ್ಲಿ ಶೇರ್ ಮಾಡಿದರೆ ಎಷ್ಟು ಲೈಕ್ ಬರಬಹುದು ಎಂದು ಲೆಕ್ಕ ಹಾಕುವವರು ನಾವು! ಕೊಳವೆ ಬಾವಿಯಲ್ಲಿ ಮಗು ಸಿಕ್ಕಿಕೊಂಡರೆ ಗೋಳಾಡುವ ಅವರ ತಂದೆತಾಯಿಯರ ಬಳಿ 'ನಿಮಗೀಗ ಏನನ್ನಿಸುತ್ತಿದೆ' ಎಂದು ಅಸಂಬದ್ಧ ಪ್ರಶ್ನೆ ಕೇಳುವ ಎಡವಟ್ಟುಗಳು ನಾವು. ಹೀಗಿರುವಾಗ ನಾವು ಥಾಯ್ ತರಹ ಸಂಕಷ್ಟದ ಪರಿಸ್ಥಿತಿ ನಿಭಾಯಿಸುವುದು ಹೇಗೆ ಸಾಧ್ಯ?

13 ವರ್ಷಗಳ ಹಿಂದೆ ಪ್ರಿನ್ಸ್ ಎಂಬ ಹುಡುಗನನ್ನು ಕೊಳವೆ ಬಾವಿಯಿಂದ ರಕ್ಷಿಸಿದ್ದು ಬಿಟ್ಟರೆ ಮತ್ಯಾರನ್ನೂ ಭೂಗರ್ಭದಿಂದ ಮೇಲೆತ್ತಲು ನಮ್ಮಿಂದ ಸಾಧ್ಯವಾಗಿಲ್ಲ. ವರ್ಷಕ್ಕೆ ಸಾವಿರಾರು ಮಕ್ಕಳು ಕೊಳವೆ ಬಾವಿಯಲ್ಲಿ ಸಿಲುಕಿ ಸಾಯುತ್ತಿದ್ದಾರೆ. ಆದರೂ ಅವನ್ನು ಮುಚ್ಚದೆ ಹಾಗೇ ಬಿಡುತ್ತೇವೆ. ಇನ್ನೊಬ್ಬರ ಮಕ್ಕಳು ಕೊಳವೆ ಬಾವಿಯಲ್ಲಿ ಬಿದ್ದು ಪ್ರಾಣಬಿಟ್ಟ ಪ್ರಕರಣಗಳು ಹಸಿಯಾಗಿರುವಾಗಲೇ ತಮ್ಮ ಮಕ್ಕಳನ್ನು ಅಂಥದೇ ಕೂಪಾಂಡದ ಬಳಿ ಆಡಲು ಬಿಡುತ್ತೇವೆ. ಇನ್ನು ರೈಲ್ವೆ ಕ್ರಾಸಿಂಗ್ ಸಮಯದಲ್ಲಿ ರೈಲು ಬರುತ್ತಿರುವುದು ತಿಳಿದರೂ ಸ್ಕೂಲ್ ಬಸ್‌ಗಳು ಹಳಿ ದಾಟಲು ನೋಡುತ್ತವೆ, ಅಪಘಾತಕ್ಕೀಡಾಗಿ ಮಕ್ಕಳನ್ನು ಮಸಣಕ್ಕೆ ನೂಕುತ್ತವೆ. ಇಲ್ಲೆಲ್ಲ ಕಾಣುವುದು ತೀವ್ರ ಅಲಕ್ಷ್ಯ. ಯೂ ಟರ್ನ್ ಮಾಡಬಾರದು ಎಂದಿದ್ದಲ್ಲೇ ಯೂ ಟರ್ನ್ ಮಾಡುವುದು, ಒನ್ ವೇ ಮಾರ್ಗದಲ್ಲಿ ಉಲ್ಟಾ ಬರುವುದು, ನೋ ಪಾರ್ಕಿಂಗ್ ಸ್ಥಳದಲ್ಲೇ ವಾಹನ ನಿಲ್ಲಿಸುವುದು, ಓಡುತ್ತಿರುವ ಬಸ್ಸಿನಿಂದ ಜಿಗಿಯುವುದು, ರೈಲಿನ ಮೇಲೆ ಹತ್ತಿಕೂತು ಪ್ರಯಾಣಿಸುವುದು, ಮೊಬೈಲ್‌ನಲ್ಲಿ ಮಾತಾಡುತ್ತಾ ಬೈಕ್ ಓಡಿಸುವುದು.... ಒಂದೇ? ಎರಡೆ? ಇಷ್ಟೆಲ್ಲ ನಿಯಮ ಮುರಿಯುತ್ತಾ, ಸುರಕ್ಷತೆಯನ್ನು ಅಲಕ್ಷಿಸುತ್ತಾ, ಇನ್ನೊಬ್ಬರ ಸಂವೇದನೆಗಳಿಗೆ ಬರಡಾಗುತ್ತಾ ಸಾಗಿರುವ ನಾವು ಥಾಯ್ ಥರದ ವಿಪತ್ತುಗಳನ್ನು ಎದುರಿಸಲು ಸಾಧ್ಯವೆ? ನನಗಂತೂ ಅನುಮಾನ.

ಇನ್ನು ಅವಘಡದಲ್ಲಿ ಸಿಲುಕಿದವರನ್ನು ಬದುಕಿಸುವ ಚಿಕ್ಕ ಅವಕಾಶವನ್ನೂ ನಾವು ಸದುಪಯೋಗ ಪಡಿಸಿಕೊಂಡವರಲ್ಲ.

ಒಂದು ವೇಳೆ ಅಂಥ ಅವಕಾಶವಿದ್ದರೂ ಸರಿಯಾದ ಮುಂಜಾಗ್ರತೆ, ಸಲಕರಣೆಗಳಿಲ್ಲದೆ ಸೋತಿದ್ದೇವೆ. ಕೊಳವೆ ಬಾವಿಯಲ್ಲಿ ಅಷ್ಟೊಂದು ಮಕ್ಕಳು ಬಿದ್ದು ಸಾಯುತ್ತಿದ್ದಾರೆ. ಆದರೆ ಇವತ್ತಿಗೂ ಆ ಸಮಸ್ಯೆಗೊಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ನಮ್ಮಿಂದ ಸಾಧ್ಯವಾಗಿಲ್ಲ. ಕೊಳವೆ ಬಾಯಿಯಲ್ಲಿ ಮಕ್ಕಳು ಸಿಲುಕಿದರೆ, ಅದಕ್ಕೆದುರಾಗಿ ಇನ್ನೊಂದು ಸುರಂಗ ತೋಡುವುದೊಂದೇ ನಮಗೆ ಗೊತ್ತಿರುವ ಇನ್ನೊಂದು ವಿಧಾನ. ಅದು ಸಫಲವಾಗುವುದಿಲ್ಲ ಎಂದು ತಿಳಿದ ಮೇಲೂ ನಾವು ಇನ್ನೊಂದು ಮಾರ್ಗದ ಬಗ್ಗೆ ತಿಳಿಯುವ ಪ್ರಯತ್ನ ನಡೆಸಿಲ್ಲ. ನಾವು ಆರ್ಥಿಕವಾಗಿ ಸಬಲರಾಗುತ್ತಿರಬಹುದು, ವಿಶ್ವಮಟ್ಟದಲ್ಲಿ ನಮ್ಮ ಸ್ಥಾನಮಾನ ರಾಜಕೀಯವಾಗಿ ಏರಿರಬಹುದು, ಜಗತ್ತು ಭಾರತದ ಬೆಳವಣಿಗೆ ಬಗ್ಗೆ ತಿರುಗಿ ನೋಡುತ್ತಿರಬಹುದು. ಆದರೆ ನಾವಿನ್ನೂ ಅಟೆಂಡ್ ಮಾಡಬೇಕಾದ ವಿಷಯಗಳು ಬಹಳಷ್ಟಿವೆ. ದಿನ ಕಳೆದಂತೆ ಕಳೆದುಕೊಳ್ಳುತ್ತಿರುವ ಸಂವೇದನೆಗಳನ್ನು ಮೊದಲು ವಾಪಸ್ ತಂದುಕೊಳ್ಳಬೇಕಿದೆ. ಇನ್ನೊಬ್ಬರ ಮಾನಸಿಕ ಸೂಕ್ಷ್ಮಗಳನ್ನು ಅಲಕ್ಷಿಸಿ.